ಬದುಕಬೇಕಾದ ಅವಕಾಶ ವಂಚಿತ ಸ್ತ್ರೀ ಸಮುದಾಯದ ಸಂಕಥನವನ್ನು ಈ ಕಾದಂಬರಿಯಲ್ಲಿ ದಿಟ್ಟವಾಗಿ ತೆರೆದಿಡುತ್ತಾರೆ.

'21ನೇಯ ಶತಮಾನದಲ್ಲಿಯೂ 'ಧಾರ್ಮಿಕ ಅಸ್ಮಿತೆ' ಎಂಬ ನೆಪದಲ್ಲಿ ಎಲ್ಲಾ ಧರ್ಮಗಳ ನಾಯಕರೂ ಪರಂಪರಾಗತ ಸ್ತ್ರೀ–ಪುರುಷ ಶ್ರೇಣೀಕರಣವನ್ನು ಹಿಂಬಾಗಿಲಿಂದ ತರಲು ಪ್ರತ್ನಿಸುತ್ತಿರುವ ಕಾರಣದಿಂದ ಈ ಕಾದಂಬರಿ ಇಂದೂ ಕೂಡಾ ಅತ್ಯಂತ ಪ್ರಸ್ತುತವಾಗಿದೆ' ಎಂದು ಡಾ. ಸಿ.ಎನ್. ರಾಮಚಂದ್ರನ್ ಅವರು ಮುನ್ನುಡಿಯಲ್ಲಿ ಹೇಳಿದ್ದಾರೆ. 'ಇಂಗ್ಲಿಷಿನಲ್ಲಿ ಸಾಮಾಜಿಕ ಕಾದಂಬರಿಯನ್ನು ಬರೆದ ಮೊದಲ ಭಾರತೀಯ ಮುಸ್ಲಿಂ ಮಹಿಳೆ ಇಕ್ಬಾಲುನ್ನೀಸಾ' ಎಂದು ತಿಳಿಸುವ ಇವರು 'ಇದು ಪ್ರಥಮ ಸ್ತ್ರೀವಾದಿ ಕಾದಂಬರಿ' ಎಂದೂ ಉಲ್ಲೇಖಿಸುತ್ತಾರೆ.

ಇದು ಭಾರತದ ಮಾತ್ರವಲ್ಲ, 'ದಕ್ಷಿಣ ಏಷಿಯಾದ ಮುಸ್ಲಿಂ ಮಹಿಳೆ ಬರೆದ ಮೊಟ್ಟ ಮೊದಲ ಕಾದಂಬರಿ' ಎನ್ನುತ್ತಾರೆ ಸಾಹಿತ್ಯ ವಿಮರ್ಶಕಿ ಮುನೀಜಾ ಶಾಮ್ಸೀ ತಮ್ಮ 'ಡಿಸ್ಕವರಿಂಗ್ ಇಕ್ಬಾಲುನ್ನೀಸಾ ಹುಸೇನ್' ಪ್ರಬಂಧದಲ್ಲಿ. ಏಳು ದಶಕಗಳಿಗೂ ಹಿಂದೆ ಬರೆದ ಈ ಕಾದಂಬರಿ ಎಲ್ಲರ ಸ್ಮೃತಿ ಪಟಲದಿಂದ ಸರಿದು ಹೋಗಿದ್ದರೂ, ಇಂಗ್ಲಿಷ್ ಭಾಷೆಯಲ್ಲಿ ಬರೆದ ಕಾರಣ, ವಿಶ್ವದ ಕೆಲವು ಗ್ರಂಥಾಲಯಗಳ ಮೂಲೆಯಲ್ಲಿ ಒಂದೊಂದು ಪ್ರತಿಗಳು ಉಳಿದಿದ್ದವು. 2007ರಲ್ಲಿ ಮುನೀಜಾ ಶಾಮ್ಸೀ, 'ಬ್ರಿಟಿಷ್ ಲೈಬ್ರರಿ'ಯಲ್ಲಿ ಆಕಸ್ಮಿಕವಾಗಿ ಸಿಕ್ಕ 'ಪರ್ದಾ & ಪಾಲಿಗೆಮಿ' ಕಾದಂಬರಿಯನ್ನು ಓದಿ ಬೆರಗಾದರು. 'ಯಾರೀಕೆ ಇಕ್ಬಾಲುನ್ನೀಸಾ?' ಎಂದು ಹುಡುಕಿ ಹೊರಟ ಅವರಿಗೆ, ಅಷ್ಟೇ ಆಕಸ್ಮಿಕವಾಗಿ 2015ರಲ್ಲಿ, ಇಕ್ಬಾಲುನ್ನೀಸಾ ಅವರ ಮೊಮ್ಮಗ ಅರೀಫ್ ಜಮಾನ್ ಅವರ ಭೇಟಿಯಾಗಿತ್ತು. ಇದೇ ಸಮಯದಲ್ಲಿ ಇದೇ ಕಾದಂಬರಿಯ ವಿಸ್ತಾರದ ಅಧ್ಯಯನದಲ್ಲಿ ತೊಡಗಿದ್ದ ಅಮೆರಿಕದ 'ಮೇರಿಲ್ಯಾಂಡ್ ವಿಶ್ವವಿದ್ಯಾಲಯ'ದ ಪ್ರೊಫೆಸರ್ ಡಾ. ಜೆಸ್ಸಿಕಾ ಬರ್ಮನ್ ಕರಾಚಿಯಲ್ಲಿದ್ದ ಇಕ್ಬಾಲುನ್ನೀಸಾ ಅವರ ಮಗಳು ಡಾ. ಸಲೀಮಾ ಅಹ್ಮದ್ ಮತ್ತು ಲಂಡನ್‌ನಲ್ಲಿ ನೆಲೆಸಿದ್ದ ಮೊಮ್ಮಗ ಅರೀಫ್ ಜಮಾನ್ ಅವರನ್ನು ತಲುಪಿದ್ದರು. 2017ರಲ್ಲಿ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನಿಂದ 'ಪರ್ದಾ ಅಂಡ್ ಪಾಲಿಗಮಿ' ಡಾ. ಜೆಸ್ಸಿಕಾ ಅವರ ಹರಿತವಾದ ಒಳನೋಟದ ದೀರ್ಘ ಪೀಠಿಕೆಯೊಂದಿಗೆ ಮರು ಮುದ್ರಣವಾಯಿತು. ಈ ಹೊತ್ತಿಗೆಯಲ್ಲಿ ಅರೀಫ್ ಜಮಾನ್ ಅವರ ಇಕ್ಬಾಲುನ್ನೀಸಾ ಕುರಿತ ಜೀವನ ವಿವರಗಳ ಪ್ರಬಂಧ ಹಾಗೂ ಮುನೀಜಾ ಶಾಮ್ಸೀ ಮತ್ತು ಸುವೀರ್ ಕೌಲ್ ಅವರ ವಿದ್ವತ್ಪೂರ್ಣ ವಿಮರ್ಶಾತ್ಮಕ ಪ್ರಬಂಧಗಳೂ ಸೇರಿದ್ದವು. ಆಂಧ್ರ ವಿಶ್ವವಿದ್ಯಾಲಯದ ಸ್ಥಾಪಕ, ಮೊದಲ ಕುಲಪತಿಯಾಗಿದ್ದ ಸರ್ ಕಟ್ಟಮಂಚಿ ರಾಮಲಿಂಗ ರೆಡ್ಡಿ ಅವರು ಇಕ್ಬಾಲುನ್ನೀಸಾ ಅವರನ್ನು 'ಭಾರತದ ಜೇನ್ ಆಸ್ಟಿನ್' ಎಂದು ಕರೆದಿರುವುದೂ ಅರಿವಾಯಿತು.

ಈ ಎಲ್ಲ ಹಿನ್ನೆಲೆಯಲ್ಲಿ, ಪಿತೃಪ್ರಧಾನತೆಯನ್ನು ಸ್ವಾತಂತ್ರ್ಯಪೂರ್ವದ ವರ್ಷಗಳಲ್ಲಿಯೇ ಅತ್ಯಂತ ತೀಕ್ಷ್ಣವಾಗಿ ಪ್ರಶ್ನಿಸಿದ, ವಿಮರ್ಶಿಸಿದ ಉಪಖಂಡದ ಮಹತ್ವದ ಕೃತಿ 'ಪರ್ದಾ & ಪಾಲಿಗೆಮಿ' ಎಂದರೆ ಉತ್ಪ್ರೇಕ್ಷೆಯಾಗದು. ತನ್ನ ಸಮುದಾಯದ 'ಹೆಣ್ಣ ಮೌನ'ಗಳಿಗೆ ಇಕ್ಬಾಲುನ್ನೀಸಾ ಮಾತು ಕೊಟ್ಟವರು.

ಇಸ್ಲಾಂ ಧರ್ಮದ ಆರಂಭದ ಸಮಯದಲ್ಲಿ ಯುದ್ಧದಲ್ಲಿ ಮಡಿದವರು ತಮ್ಮ ಹಿಂದೆ ಬಿಟ್ಟು ಹೋಗುವ ಅನಾಥ ಹೆಂಗಸರ–ಮಕ್ಕಳ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ ಬಹುಶಃ ಮಾನ್ಯತೆ ಪಡೆದಿದ್ದ ಬಹುಪತ್ನಿತ್ವ, ಆಧುನಿಕ ಕಾಲದಲ್ಲಿಯೂ ಮುಂದುವರೆದು ಮುಸ್ಲಿಂ ಮಹಿಳೆಯರನ್ನು ಕಾಡುತ್ತಿರುವ ದುರಂತವನ್ನು ಇಕ್ಬಾಲುನ್ನೀಸಾ ಗುರುತಿಸಿದ್ದರು. 'ಇಸ್ಲಾಂ ಭರವಸೆಯ ಧರ್ಮ' ಎಂದು ಗೌರವಿಸುವ ಇಕ್ಬಾಲುನ್ನೀಸಾ, ಪುರುಷರು ತಮ್ಮ ಅನುಕೂಲಕ್ಕೆ ತಕ್ಕಂತೆ ಧರ್ಮವನ್ನು ವ್ಯಾಖ್ಯಾನಿಸಿ ಹೆಣ್ಣನ್ನು ಪರದೆಯ ಹಿಂದೆ ಬಿಗಿದಿಟ್ಟ ಲಿಂಗರಾಜಕಾರಣವನ್ನು ಬಲವಾಗಿ ವಿರೋಧಿಸುತ್ತಾರೆ.